ಕಾರೆಕೆರೆ ಕೃಷಿ ವಿದ್ಯಾರ್ಥಿಗಳಿಂದ ಸೋಮನಹಳ್ಳಿ ಗ್ರಾಮದಲ್ಲಿ ಕೃಷಿ ಕಲರವ

ರೈತರ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಿ

ಹಾಸನ: ತಾಲೂಕಿನ ಸೋಮನಹಳ್ಳಿ ಗ್ರಾಮದ ಎಚ್.ಡಿ ದೇವೇಗೌಡ ಸಮುದಾಯಭವನದಲ್ಲಿ ಹಾಸನ ಕಾರೆಕೆರೆ ಕೃಷಿ ಮಹಾ ವಿದ್ಯಾಲಯದ ವತಿಯಿಂದ ರೈತರಿಗೆ ಗ್ರಾಮೀಣ ಸಹಭಾಗಿತ್ವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕೃಷಿ ವಿದ್ಯಾರ್ಥಿಗಳು ಗ್ರಾಮದ ನಕ್ಷೆ ತಯಾರಿಸಿ ಗ್ರಾಮದ ಮುಖಂಡರು ಹಾಗೂ ಮಹಿಳೆಯರಿಂದಲೇ ಗ್ರಾಮದ ಪ್ರಮುಖ ಸ್ಥಳಗಳನ್ನು ಗುರುತಿಸುವ ಮೂಲಕ ಗಮನ ಸೆಳೆದರು. ಜೊತೆಗೆ ಹಳ್ಳಿ ಸೊಗಡಿನ ರಾಗಿ ಮಂಟಪ, ಚಲನವಲನ ನಕ್ಷೆ, ಬೆಳೆಗಳ ಗೋಪುರ, ಆದ್ಯತೆ ಶ್ರೇಣಿ, ಸಮಸ್ಯಾತ್ಮಕ ವೃಕ್ಷ, ಬೆಳೆ ಋತುಮಾನ ಚಕ್ರ, ಶ್ರೇಣಿ ಪದ್ಧತಿ, ವೃಕ್ಷ ಸ್ಥಾಪನೆ ಮಾಡುವ ಮೂಲಕ ಸಮಗ್ರ ಕೃಷಿ ಪದ್ಧತಿ ಬಗ್ಗೆ ನಕ್ಷೆ ರಚಿಸಿ ಅದರ ಬಗ್ಗೆ ಗ್ರಾಮದ ಮುಖಂಡರು, ಮಹಿಳೆಯರು ಹಾಗೂ ಮಕ್ಕಳಿಗೆ ಮಾಹಿತಿ ನೀಡಿದರು.

ಈ ವೇಳೆ ಸೋಮನಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷ ನಾಗೇಂದ್ರ ಮಾತನಾಡಿ, ಕಾರೆಕೆರೆ ಕೃಷಿ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ನಮ್ಮ ಗ್ರಾಮಕ್ಕೆ ಬಂದಾಗಿನಿಂದ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ, ವಿದ್ಯಾರ್ಥಿ ಜೀವನದಲ್ಲೇ ರೈತರ ಸಮಸ್ಯೆಗಳು ಹಾಗೂ ಅವುಗಳಿಗೆ ಪರಿಹಾರ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಅನ್ವೇಷಣೆಗೆ ಮುಂದಾಗಿರುವ ವಿದ್ಯಾರ್ಥಿಗಳ ನಡೆ ಶ್ಲಾಘನೀಯ ಎಂದರು.

ಗ್ರಾಮೀಣ ರೈತರಿಗೆ ಮಣ್ಣಿನ ಮಹತ್ವ, ರಾಸಾಯನಿಕ ಗೊಬ್ಬರಗಳಿಂದ ಆಗುವ ಅಪಾಯ, ಕೃಷಿ ಚಟುವಟಿಕೆಗಳಲ್ಲಿ ಅನುಸರಿಸಬೇಕಾದ ಸಾವಯವ ಪದ್ಧತಿ, ಸಾವಯವ ಕೃಷಿಯ ಉಪಯೋಗ ಹೀಗೆ ವಿವಿಧ ವಿಚಾರಗಳ ಬಗ್ಗೆ ರೈತರಿಗೆ ತಿಳಿಸಿಕೊಟ್ಟು ಆರೋಗ್ಯಕರ ಕೃಷಿ ಉತ್ಪನ್ನಗಳನ್ನು ಬೆಳೆಯಲು ಅನೇಕ ಸಲಹೆಗಳನ್ನು ನೀಡಿದ್ದಾರೆ ಎಂದರು.

ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬೇಸಾಯ ಶಸ್ತ್ರ ವಿಭಾಗದ ಪ್ರಾಧ್ಯಾಪಕ ಸದಾಶಿವನಗೌಡ ಮಾತ ನಾಡಿ, ಗ್ರಾಮೀಣ ಸಹಭಾಗಿತ್ವ ಅಧ್ಯಯನ ಎಂಬ ಕಾರ್ಯಕ್ರಮದ ಅಡಿಯಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಗ್ರಾಮದ ರೈತರು ಸಕಾರಾತ್ಮಕವಾಗಿ ಸ್ಪಂದಿಸಿ ಕೃಷಿ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸಹಕಾರ ನೀಡುತ್ತಿದ್ದಾರೆ. ಜೊತೆಗೆ ಕೃಷಿ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಉಪಯುಕ್ತ ಮಾಹಿತಿ ಪಡೆಯುವ ಮೂಲಕ ವಿದ್ಯಾರ್ಥಿಗಳಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರು, ಮಹಿಳೆಯರು ಹಾಗೂ ಕೃಷಿ ಕಾಲೇಜಿನ ವಿದ್ಯಾರ್ಥಿಗಳು ಇದ್ದರು.

"ನಮ್ಮ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳು ಗ್ರಾಮಕ್ಕೆ ಭೇಟಿ ನೀಡಿ ಸತತ ಮೂರು ತಿಂಗಳು ಇಲ್ಲೇ ನೆಲೆಸಿ ಗ್ರಾಮದಲ್ಲಿನ ಕೃಷಿ ಚುವಟಿಕೆಗಳಲ್ಲಿ ಇರುವ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ ಅವುಗಳಿಗೆ ಪರಿಹಾರ ಮಾರ್ಗೋಪಾಯದ ಬಗ್ಗೆ ಗ್ರಾಮದ ರೈತರಿಗೆ ಮಾಹಿತಿ ನೀಡುವ ಕೆಲಸ ಮಾಡುತ್ತಿದ್ದಾರೆ.

■ ಸದಾಶಿವನಗೌಡ,
ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕ

31-08-2024
Hosadiganta
Pg 12

ICAR scientists hired without reservation

They still form the core of its agri researchers but they have little chance to make it to senior posts, which are filled through the lateral entry system.

The ICAR is one of the largest agricultural and allied activities research bodies globally. It employs 6,304 scientists, as per a July 2020 office memo. This is a marginal increase of 23 positions since 1997 across ICAR's eight divisions. Of the current 6,304 on its rolls, 4,420 hold the grade of Scientists, who are recruited through the single-entry system that adheres to reservation policies. The remaining 1,884 positions – comprising Senior Scientists, Principal Scientists, Directors, Heads of Divisions (HoD), Heads of Regional Centres (HoRC), Project Coordinators (PCs), Directors-General, Additional and Deputy Directors-General – have been filled through the direct interview, or lateral entry process, which restricts affirmative action policies to be only followed for the lowest entrant. Including past appointments, there are more than 2,700 who have been hired using this system.

An August 2023 ASRB advertisement to fill senior-level positions relies on a July 7, 1994 letter from ICAR exempting such vacancies from the reservation policy. While this does not violate existing norms, it overlooks the 1995 Constitutional amendment introducing Article 16(4A) enabling reservations to be followed in promotions for SCs and STs. A five-judge bench of the Supreme Court in 2006 in *Nagaraj Vs Union of India* upheld the amendments as constitutionally valid while leaving it to the States to decide the adequacy of reservation based on quantifiable data.

It should be noted that the recruitment of scientists to government departments such as Space, Atomic Energy, and Earth Sciences are also exempt from reservation norms.

The Hindu sought comments from the Agriculture Ministry, ICAR, and ASRB. An Agriculture Ministry official would neither deny nor confirm that the lateral entry system of recruitment is being followed, but said that the hiring process is "complex", requiring a fuller explanation. While ICAR declined to comment, there was no response from ASRB until the time of the publication of this article.

Speaking to *The Hindu*, ARSSF president, and Principal Scientist Dr. S. Manivannan said: "You can count on your fingers the number of SCs, STs, OBCs, and minorities who have become Directors, or held RMPs. And a few among them were promoted following prolonged court battles challenging selection committee decisions and procedures." He added that "past DGs converted a few lateral entry positions to Direct Scientists positions, but still sizable numbers have been left out."

31-08-2024
Hindu
Pg 12

ಹಸಿರು ಬೆಳೆಸುವ ಉಪಕ್ರಮ ಮುಂಚೂಣಿಯಲ್ಲಿ ಯು.ಪಿ.

ಉತ್ತರ ಪ್ರದೇಶವು ರಾಜ್ಯದಲ್ಲಿ ಮರಗಳ ವ್ಯಾಪ್ತಿ ಪ್ರದೇಶ ಹೆಚ್ಚಿಸಲು ಅಮೇರಿಕಾದ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ (USAID) ಸಹಯೋಗದೊಂದಿಗೆ 'ಭಾರತದಲ್ಲಿ ಅರಣ್ಯದ ಹೊರೆಗೆ ಮರಗಳು' (TOFI) ಬೆಳೆಸುವ ಕ್ರಮ ಕೈಗೊಂಡಿದೆ.

ಅರಣ್ಯ ಪ್ರದೇಶದ ಹೊರಗೆ ಗಿಡ ಮರಗಳನ್ನು ಬೆಳೆಸಲು ಉತ್ತರ ಪ್ರದೇಶ ರಾಜ್ಯವು ಹಿಂದಿನಿಂದಲೂ ಹೆಚ್ಚಿನ ಆದ್ಯತೆ ನೀಡಿದೆ. ಅರಣ್ಯೀಕರಣ ಅಥವಾ ಸಮಗ್ರ ಕೃಷಿ ಮರ ಬೆಳೆಸುವುದನ್ನು ಹವಾಮಾನ ಬದಲಾವಣೆ ಕುರಿತು ಅದರ ರಾಜ್ಯ ಕ್ರಿಯಾ ಯೋಜನೆಯಲ್ಲಿ ಮತ್ತು ರೈತರನ್ನು ಕಾರ್ಬನ್ (ಇಂಗಾಲ) ಮಾರುಕಟ್ಟೆಗಳಿಗೆ ಸಂಪರ್ಕಿಸುವ ತನ್ನ ಕೆಲಸದ ಮೂಲಕ ಪ್ರದರ್ಶಿಸಿದೆ.

ರಾಜ್ಯದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆ ಹಾಗೂ ಅಮೇರಿಕಾದ 'ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್' (USAID) ಜಂಟಿಯಾಗಿ 'ಭಾರತದಲ್ಲಿ ಅರಣ್ಯದ ಹೊರೆಗೆ ಮರಗಳು' (TOFI) ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿವೆ. ಈ ಕಾರ್ಯಕ್ರಮವು ರಾಜ್ಯದಲ್ಲಿ ಸಾಂಪ್ರದಾಯಿಕ ಅರಣ್ಯಗಳ ಹೊರ ಪ್ರದೇಶದಲ್ಲಿ ಮರಗಳ ವ್ಯಾಪ್ತಿಯನ್ನು ವಿಸ್ತರಿಸಲು ರೈತರು, ಕಂಪನಿಗಳು ಮತ್ತು ಇತರ ಖಾಸಗಿ ಸಂಸ್ಥೆಗಳನ್ನು ಒಂದುಗೂಡಿಸುತ್ತಿದೆ. ಈ ಕಾರ್ಯಕ್ರಮವನ್ನು ಜನವರಿ 31. 2023 ರಂದು ಪ್ರಾರಂಭಿಸಲಾಗಿದ್ದು ಮುಂದಿನ 5 ವರ್ಷಗಳವರೆಗೆ ಮುಂದುವರೆಯುತ್ತದೆ.

ಈ ಉಪಕ್ರಮದಿಂದ ರಾಜ್ಯವು ಇಂಗಾಲದ (ಕಾರ್ಬನ್) ಪ್ರತ್ಯೇಕತೆ ಹೆಚ್ಚಿಸಲು, ಸ್ಥಳೀಯ ಸಮುದಾಯಗಳಿಗೆ ಪ್ರೋತ್ಸಾಹಿಸಲು, ಕೃಷಿಯಲ್ಲಿ ಹವಾಮಾನ ಪ್ರತಿರೋಧ ಬಲಪಡಿಸಲು ಸಹಾಯ ಮಾಡಿದೆ. ಇದು ಜಾಗತಿಕ ಹವಾಮಾನ ಬದಲಾವಣೆಯ ದುಷ್ಪರಿಣಾಮ ತಗ್ಗಿಸುವುದಕ್ಕೆ ಮತ್ತು ಹೊಂದಾಣಿಕೆಯನ್ನು ಪ್ರೋತ್ಸಾಹಿಸುತ್ತದೆ.

ಉತ್ತರ ಪ್ರದೇಶ ಸರಕಾರವು ಅಧಿಸೂಚಿತ ಅರಣ್ಯ ಪ್ರದೇಶಗಳ ಹೊರಗಿನ ಭೂಮಿಯಲ್ಲಿ ಕೃಷಿ ಅರಣ್ಯ ಮತ್ತು ಗಿಡಮರ ನೆಡುವಿಕೆಗೆ ಹೆಚ್ಚು ಒತ್ತು ನೀಡುತ್ತಿದೆ. ಕೇವಲ 9% ಹಸಿರು ಪ್ರದೇಶ ಹೊಂದಿರುವ ರಾಜ್ಯವು ಮುಂಬರುವ ವರ್ಷಗಳಲ್ಲಿ ಇದನ್ನು 15% ಗೆ ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದೆ.

'ಭಾರತದಲ್ಲಿ ಅರಣ್ಯದ ಹೊರಗೆ ಮರಗಳು' (TOFI) ಬೆಳೆಸುವ ಕಾರ್ಯಕ್ರಮವನ್ನು ಜನವರಿ 31, 2023 ರಂದು ಪ್ರಾರಂಭಿಸಲಾಯಿತು. ಈ ಉಪಕ್ರಮವು ಇಂಗಾಲಾಮ್ಲ (ಕಾರ್ಬನ್ ಡೈ ಆಕ್ಸೈಡ್) ಪ್ರತ್ಯೇಕಿಸಲು, ಸ್ಥಳೀಯ ಸಮುದಾಯಗಳನ್ನು ಪ್ರೋತ್ಸಾಹಿಸಲು ಮತ್ತು ಹವಾಮಾನ ಸ್ಥಿತಿಸ್ಥಾಪಕತ್ವ ಬಲಪಡಿಸಲು ಸಹಾಯ ಮಾಡಿದೆ.

TOFI ನಂತಹ ಕಾರ್ಯಕ್ರಮದೊಂದಿಗೆ ಯುಪಿ ಸರಕಾರವು ಕಡಿಮೆ ಮರಗಳಿರುವ ಭೂಪ್ರದೇಶಗಳಲ್ಲಿ ಕೃಷಿ ಅರಣ್ಯ ಮತ್ತು ಮರಗಳ ವ್ಯಾಪ್ತಿಯನ್ನು ಹೆಚ್ಚಿಸಲು ಹಾಗೂ ರೈತರಿಗೆ ಜೀವನೋಪಾಯದ ಭದ್ರತೆ, ಆದಾಯ ಮತ್ತು ಒಟ್ಟಾರೆ ಪರಿಸರ ಸೇವೆಗಳನ್ನು ಹೆಚ್ಚಿಸುವ ಜೊತೆಗೆ ಸರಿಯಾದ ಸ್ಥಳದಲ್ಲಿ ಸರಿಯಾದ ಜಾತಿಯ ಮರಗಳ ಆಯ್ಕೆ ಮಾಡಲು ಸಹಾಯ ಮಾಡುತ್ತಿದೆ.

ಹವಾಮಾನ ಬದಲಾವಣೆ ಮತ್ತು ಅರಣ್ಯೀಕರಣ ಕುರಿತು ಭಾರತ ಮತ್ತು ಅಮೇರಿಕಾ ಸಹಕಾರದ ವ್ಯವಹಾರಗಳ ಅಮೇರಿಕಾದ ಮುಖ್ಯಸ್ಥೆ ಪಟ್ರೀಷಿಯಾ ಎ ಲಸೀನಾ ಅವರು ಜಾಗತಿಕ ದೊಡ್ಡ ಆರ್ಥಿಕತೆಗಳಲ್ಲಿ ಒಂದಾದ ಹಾಗೂ ವಿಜ್ಞಾನ ಮತ್ತು ಆವಿಷ್ಕಾರಗಳಲ್ಲಿ ಮುಂದಿರುವ ಭಾರತ, ಹವಾಮಾನ ಬಿಕ್ಕಟ್ಟು ಪರಿಹರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಭಾರತ ಮಾಡುವ ಸಾಧನೆಗಳು ಮಾದರಿಯಾಗುತ್ತವೆ ಎಂದಿದ್ದಾರೆ.

ಯು.ಪಿ.ಯಲ್ಲಿ ಸಮೃದ್ಧಿ ತರುತ್ತಿರುವ ಕೃಷಿ ಅರಣ್ಯೀಕರಣ

ಯು.ಪಿ ಸರಕಾರ ಸಾರಿಗೆ ನಿಯಮಗಳ ಸಡಿಲಿಕೆ ಮತ್ತು ಸರಳೀಕರಣಗೊಳಿಸಲು ಯತ್ನಿಸುತ್ತಿದೆ. ಪ್ರತಿ ಕಮೀಷನರೇಟ್‌ಗಳಲ್ಲಿ ಒಂದು ಹೈಟೆಕ್ ನರ್ಸರಿ ಮತ್ತು ಪ್ರತಿ ನ್ಯಾಯ ಪಂಚಾಯತ್‌ನಲ್ಲಿ ಗ್ರಾಮ ಮಟ್ಟದ ನರ್ಸರಿಗಳನ್ನು ಸ್ಥಾಪಿಸುವುದು ಮುಂದಿನ ಉಪಕ್ರಮಗಳಲ್ಲಿ ಸೇರಿವೆ. ಕೃಷಿ ಅರಣ್ಯೀಕರಣವು ಹವಾಮಾನ ಬದಲಾವಣೆಯ ದುಷ್ಪರಿಣಾಮ ತಗ್ಗಿಸುವುದು ಮಾತ್ರವಲ್ಲದೇ ರೈತರ ಆದಾಯ ದ್ವಿಗುಣಗೊಳಿಸಲು ಪ್ರಯೋಜನಕಾರಿಯಾಗಿದೆ.

ಹಸಿರ ಸಿರಿಯ ಗುರಿ

ಅರಣ್ಯ ಮತ್ತು ಸರ್ಕಾರದ ಇತರೆ 25 ಇಲಾಖೆಗಳಿಂದ ಈ ವರ್ಷ 36 ಕೋಟಿಗೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ಅರಣ್ಯ ಇಲಾಖೆಗೆ 14 ಕೋಟಿ ಗುರಿಯಿದ್ದು, ಅರಣ್ಯ ಇಲಾಖೆಯು ಉಚಿತವಾಗಿ ಸಸಿಗಳನ್ನು ನೀಡಿದೆ.

ಈ ವರ್ಷದ ಅಭಿಯಾನದಲ್ಲಿ ಇವುಗಳು ಸೇರಿವೆ

- ಬಾಲ ವನ
- ಅಮೃತ ವನ
- ನಗರ ವನ
- ಯುವ ವನ
- ನಕ್ಷತ್ರ ವಾಟಿಕ
- ಶಕ್ತಿ ವನ
- ಮಿತ್ರ ವನ
- ವಿರಾಸತ್ ವಾಟಿಕ
- ವೆಟ್‌ಲ್ಯಾಂಡ್ ವನ

ನೆಡಲಾಗುತ್ತಿರುವ ಜಾತಿಯ ಸಸಿಗಳು

- ಬೇವು
- ಸಹಜನ್
- ಮಾವು
- ಬೆಲ್
- ಅರ್ಜುನ್
- ಇಮ್ಲಿ
- ತೇಗ
- ಪೀಪಲ್
- ಆಲದಮರ
- ಪಾಕರ್
- ಬಿದಿರು
- ಆಓನ್ಲಾ

ಎಲ್ಲರಿಗೂ ಒಂದೊಂದು ಅಭಿಯಾನ

- ಬಾಲ ವನ (ಮಕ್ಕಳಿಂದ ನೆಡುತೋಪು)
- ಶಕ್ತಿ ವನ (ಮಹಿಳೆಯರಿಂದ)
- ಯುವ ವನ (ಯುವಕರಿಂದ)

ಮಿಯಾವಾಕಿ ಮಾರ್ಗ

ಉತ್ತರ ಪ್ರದೇಶ ರಾಜ್ಯ ಕೈಗಾರಿಕಾ ಪ್ರಾಧಿಕಾರವು (ಯುಪಿಎಸ್‌ಐಡಿಎ) 1.8 ಲಕ್ಷ ಸಸಿ ನೆಡುವ ಮಹತ್ವಾಕಾಂಕ್ಷೆಯ ಗುರಿಯನ್ನು ಪೂರ್ಣಗೊಳಿಸಲು ಹೊಸ ಅನ್ವೇಷಣೆಯ ಮಿಯಾವಾಕಿ ತಂತ್ರವನ್ನು ಬಳಸುತ್ತಿದೆ.

ಪರಿಸರ ಸ್ನೇಹಿ 'ಮಿತ್ರ ವನ'

ಉತ್ತರ ಪ್ರದೇಶ ಸರಕಾರವು ರಾಜ್ಯದಲ್ಲಿ ಹಸಿರು ಪ್ರದೇಶ ವ್ಯಾಪ್ತಿಯನ್ನು ಹೆಚ್ಚಿಸುವ ತನ್ನ ಬದ್ಧತೆಯ ಮುಂದುವರಿಕೆಯಾಗಿ ಗಡಿಭಾಗಗಳ ಉದ್ದಕ್ಕೂ 'ಮಿತ್ರ ವನ' ನೆಡುತೋಪು ಅಭಿಯಾನ ಪ್ರಾರಂಭಿಸಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರ ಪ್ರದೇಶ ಸರಕಾರ 'ವೃಕ್ಷಾರೋಪಣ ಜನ ಅಭಿಯಾನ, 2024'ರಡಿ 'ಮಿತ್ರ ವನ' ಎಂಬ ಪ್ರಮುಖ ನೆಡುತೋಪು ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಈ ಉಪಕ್ರಮವು ಉತ್ತರ ಪ್ರದೇಶ ಮತ್ತು ನೇಪಾಳದ ಗಡಿಯಲ್ಲಿ 35 ಕೋಟಿಗೂ ಹೆಚ್ಚು ಸಸಿಗಳನ್ನು ನೆಡುವ ಮೂಲಕ ಹಸಿರು ಹೆಚ್ಚಿಸುವ ಗುರಿಯನ್ನು ಹೊಂದಿದೆ.

ರಾಜ್ಯದ ಅರಣ್ಯ ಇಲಾಖೆಯು ಈ ಅಭಿಯಾನ ಯಶಸ್ವಿಗೊಳಿಸಲು ನೇಪಾಳದಂತಹ ನೆರೆಯ ದೇಶಗಳೊಂದಿಗೆ ಸಹಯೋಗವನ್ನು ಸ್ಥಾಪಿಸಿದೆ. ಗಡಿಗಳಿಗೆ ಸಮೀಪವಿರುವ ಜಿಲ್ಲೆಗಳಲ್ಲಿ ಮರಗಳನ್ನು ನೆಡುವ ವ್ಯಾಪಕ ಯೋಜನೆ ಹೊಂದಿರುವ ಈ ಉಪಕ್ರಮವು 35 ಅರಣ್ಯ ವಿಭಾಗಗಳನ್ನು ಒಳಗೊಳ್ಳುತ್ತದೆ.

'ಮಿತ್ರ ವನ' ಜೊತೆಗೆ 'ವೆಟ್‌ಲ್ಯಾಂಡ್ ವನ', 'ವಿರಾಸತ್ ವಾಟಿಕಾ', 'ಶಕ್ತಿವನ', 'ಯುವ ವನ' ಮತ್ತು 'ಬಾಲ ವನ'ದಂತಹ ವಿಶೇಷ ವನಗಳು ಈ ಯೋಜನೆ ಒಳಗೊಂಡಿದೆ. ಮರಗಳ ಆಯ್ಕೆ ಮತ್ತು ನೆಡುವುದಕ್ಕೆ ಸಂಬಂಧಿಸಿದಂತೆ ಅರಣ್ಯ ಇಲಾಖೆಯು ಸ್ಥಳೀಯ ಮತ್ತು ವಿದೇಶಿ ಗಣ್ಯರೊಂದಿಗೆ ಸಹಯೋಗ ಸಾಧಿಸುತ್ತಿದೆ.

ಉತ್ತರ ಪ್ರದೇಶ ಸರಕಾರದಿಂದ ನುಗ್ಗೆಕಾಯಿ ಸಸಿ ನೆಡುವ ಅಭಿಯಾನ

ಮುಂಬರುವ ಸೆಪ್ಟೆಂಬರ್‌ನಲ್ಲಿ ಕೊನೆಗೊಳ್ಳಲಿರುವ ಉತ್ತರ ಪ್ರದೇಶ ರಾಜ್ಯಾದ್ಯಂತ ನೆಡುತೋಪು ಅಭಿಯಾನದಲ್ಲಿ 55 ಲಕ್ಷಕ್ಕೂ ಹೆಚ್ಚು ನುಗ್ಗೆಕಾಯಿ ಸಸಿಗಳನ್ನು ನೆಡಲಾಗುತ್ತಿದೆ.

ಉತ್ತರ ಪ್ರದೇಶದ ನೆಡುತೋಪು ಅಭಿಯಾನವು ರಾಜ್ಯ ಸರಕಾರದ ಸಾರ್ವಜನಿಕ ಆರೋಗ್ಯದ ಉಪಕ್ರಮಗಳ ಮೇಲೆ ಒತ್ತು ನೀಡಿದೆ. ನುಗ್ಗೆಕಾಯಿ ಹೆಚ್ಚು ಪೌಷ್ಟಿಕಾಂಶ ಹೊಂದಿರುವುದಕ್ಕೆ ಹೆಸರುವಾಸಿಯಾಗಿದೆ. ಇದನ್ನು ಪೌಷ್ಟಿಕತೆಯ ಶಕ್ತಿಕೇಂದ್ರ ಎಂದೂ ಕರೆಯಲಾಗುತ್ತದೆ.

ಈ ವರ್ಷ ಸಸಿ ನೆಡುವ ಕಾರ್ಯಕ್ರಮದಲ್ಲಿ 55 ಲಕ್ಷ ನುಗ್ಗೆಕಾಯಿ ಸಸಿ ನೆಡುವುದು ಒಳಗೊಂಡಿದೆ. ಪ್ರತಿಯೊಂದು ಅಂಗನವಾಡಿ ಕೇಂದ್ರ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆ ಫಲಾನುಭವಿಗಳಿಗೆ ನುಗ್ಗೆಕಾಯಿ ಸಸಿಗಳನ್ನು ನೀಡಲಾಗುತ್ತಿದೆ.

ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಮಹತ್ವಾಕಾಂಕ್ಷೆ ಜಿಲ್ಲೆಗಳಲ್ಲಿ ಪ್ರತಿ ಕುಟುಂಬವನ್ನು ನುಗ್ಗೆಕಾಯಿ ಸಸಿ ನೆಡಲು ಪ್ರೋತ್ಸಾಹಿಸಲಾಗುತ್ತಿದೆ. ಇದು ಮನೆ ತೋಟದ ಉಪಕ್ರಮದ ಹಿಂದಿನ ಕಲ್ಪನೆಯೂ ಆಗಿದೆ. ಜನರು ನುಗ್ಗೆಕಾಯಿ ಪ್ರಯೋಜನಗಳ ಬಗ್ಗೆ ಅರಿತು ಅವುಗಳನ್ನು ಸೇವಿಸಿದರೆ ಅದು ಅಪೌಷ್ಟಿಕತೆ ವಿರುದ್ಧದ ಹೋರಾಟಕ್ಕೆ ಸಮಾನವಾಗಿರುತ್ತದೆ.

ಕೇಂದ್ರ ಸರಕಾರ ಕೂಡಾ ನುಗ್ಗೆಕಾಯಿಯ ಪ್ರಯೋಜನಗಳನ್ನು ಗುರುತಿಸಿದೆ. ಪ್ರಧಾನಮಂತ್ರಿ ಪೋಷಣಾ ಯೋಜನೆಯಲ್ಲಿ ಸ್ಥಳೀಯವಾಗಿ ಹಂಗಾಮಿನಲ್ಲಿ ಬೆಳೆಯಲಾಗುವ ಪೋಷಕಾಂಶಗಳ ಸಮೃದ್ಧ ಪಾಲಕ ಹಾಗೂ ಇತರ ತರಕಾರಿ ಮತ್ತು ದ್ವಿದಳ ಧಾನ್ಯಗಳ ಜೊತೆಗೆ ನುಗ್ಗೆಕಾಯಿ ಸಸಿ ನೆಡುವುದನ್ನು ಕೂಡಾ ಪ್ರೋತ್ಸಾಹಿಸಲಾಗಿದೆ.

ಪ್ರತಿಯೊಂದು ಅಂಗನವಾಡಿ ಕೇಂದ್ರ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆ ಫಲಾನುಭವಿಗಳಿಗೆ ನುಗ್ಗೆಕಾಯಿ ಸಸಿಗಳನ್ನು ನೀಡಲಾಗುತ್ತಿದೆ.

31-08-2024
V-karanatakaPg 09

ಹಸಿರು ಹೊದಿಕೆಯ ವಿಸ್ತರಣೆ
ರಾಜ್ಯ ಭೂದೃಶ್ಯದ ಪರಿವರ್ತನೆ

> "#ತಾಯಿ ಹೆಸರಿನಲ್ಲಿ ಒಂದು ಸಸಿ ನೆಡುವ ಅಭಿಯಾನವನ್ನು ಆರಂಭಿಸಲು ನನಗೆ ತುಂಬಾ ಸಂತಸವೆನಿಸಿದೆ. ದೇಶವಾಸಿಗಳು ಮತ್ತು ರಾಷ್ಟ್ರದಲ್ಲಿನ ಪ್ರಪಂಚದ ಎಲ್ಲಾ ಜನರು ತಮ್ಮ ತಾಯಿ ಜೊತೆಗೂಡಿ ಅಥವಾ ಅವರ ಹೆಸರಿನಲ್ಲಿ ಒಂದು ಸಸಿ ನೆಡುವಂತೆ ಒತ್ತಾಯಿಸುತ್ತೇನೆ. ಇದು ನಿಮ್ಮ ತಾಯಿಗೆ ನೀಡುವ ಅಮೂಲ್ಯವಾದ ಉಡುಗೊರೆಯಾಗಿರುತ್ತದೆ."
>
> ನರೇಂದ್ರ ಮೋದಿ
> ಪ್ರಧಾನಮಂತ್ರಿ

ಪ್ರಕೃತಿ ಮಾತೆಯೊಂದಿಗೆ ಭಾವನಾತ್ಮಕ ಸಂಪರ್ಕ

ರಕ್ಷಾಬಂಧನದಂದು ಕುಟುಂಬ ಸದಸ್ಯರು ಅಥವಾ ಸಹೋದರ-ಸಹೋದರಿಯರ ಹೆಸರಿನಲ್ಲಿ ಸಸಿ ನೆಡಲು ಜನರನ್ನು ವಿನಂತಿಸುವ ಮೂಲಕ 'ಸಾರ್ವಜನಿಕ ಭಾವನೆ'ಗಳುಳ್ಳ ಈ ವರ್ಷದ ವನ ಮಹೋತ್ಸವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. 'ಕುಲ-ದೇವತೆಯ ವನ' ಎಂದು ಗುರುತಿಸಲಾದ ಕೌಟುಂಬಿಕ ದೇವತೆಗಳ ಹೆಸರಿನಲ್ಲಿ ನೆಡುತೋಪುಗಳನ್ನು ಪ್ರೋತ್ಸಾಹಿಸಲಾಗಿದೆ. ದೇವಸ್ಥಾನಗಳಲ್ಲೂ ಸಸಿಗಳನ್ನು 'ಪ್ರಸಾದ'ವಾಗಿ ವಿತರಿಸಲಾಗಿದೆ.

ಪ್ರಕೃತಿಯೊಂದಿಗೆ ಯುಪಿಯ ಪರಂಪರೆ

ಈ ವರ್ಷ 'ವಿರಾಸತ್ ವೃಕ್ಷ ವಾಟಿಕಾ' ಎಂಬ ಹೊಸ ಉಪಕ್ರಮವನ್ನು ಆರಂಭಿಸಲಾಗಿದೆ. ಯುಪಿ ಸರ್ಕಾರವು ಐತಿಹಾಸಿಕ ಅಥವಾ ಪೌರಾಣಿಕ ಪ್ರಸ್ತುತತೆಯ ಅಥವಾ ಅಳಿವಿನಂಚಿನಲ್ಲಿನ 900ಕ್ಕೂ ಹೆಚ್ಚು ಪಾರಂಪರಿಕ ಮರಗಳನ್ನು ವಿವರಿಸಿದೆ. ಅಸ್ತಿತ್ವದಲ್ಲಿರುವ ಪಾರಂಪರಿಕ ಮರಗಳ ಸಸ್ಯ ಅಂಗಾಂಶಗಳನ್ನು ಇತರೆ ಸ್ಥಳಗಳಲ್ಲಿ ಗಿಡಗಳನ್ನು ನೆಡಲು ಬಳಸಲಾಗುತ್ತಿದೆ.

ಪ್ರಧಾನಿ ನರೇಂದ್ರ ಮೋದಿಯವರ 'ತಾಯಿ ಹೆಸರಿನಲ್ಲಿ ಸಸಿ ನೆಡುವ' ಅಭಿಯಾನದಿಂದ ಸ್ಫೂರ್ತಿ ಪಡೆದ ಯುಪಿಯ 'ವನ ಮಹೋತ್ಸವ' ಅಭಿಯಾನವು ಸೆಪ್ಟೆಂಬರ್ ತಿಂಗಳವರೆಗೆ ಮುಂದುವರಿಯಲಿದ್ದು, ಇದು ಉತ್ತರ ಪ್ರದೇಶದ ಹಸಿರು ಹೊದಿಕೆಯನ್ನು ವೇಗವಾಗಿ ವಿಸ್ತರಿಸುತ್ತಿದೆ. ಇದರಲ್ಲಿ ರಾಜ್ಯದ ಇಲಾಖೆಗಳು ಮತ್ತು ಸಾರ್ವಜನಿಕರ ಪ್ರಯತ್ನಗಳು ಸೇರಿವೆ. ಜುಲೈ 20ರ ಉದ್ಘಾಟನಾ ದಿನದ ವೇಳೆಗೆ ಯುಪಿಯ ನೆಡುತೋಪುಗಳ ಅಂಕಿಅಂಶ 36.5 ಕೋಟಿಗೂ ಮೀರಿದೆ.

ರಾಜ್ಯದ ಹಸಿರ ಸಿರಿಯನ್ನು ಹೆಚ್ಚಿಸುವ ಮತ್ತು ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸುವ ಗುರಿ ಹೊಂದಿರುವ ಸಿಎಂ ಯೋಗಿ ಆದಿತ್ಯನಾಥ್ ನೇತೃತ್ವದ ಸರ್ಕಾರ ಮತ್ತೊಂದು ಗಮನಾರ್ಹ ದಾಖಲೆಯನ್ನು ಸ್ಥಾಪಿಸಿದೆ. ಅಭಿಯಾನದ ಉದ್ಘಾಟನಾ ದಿನ (ಜುಲೈ 20) 36.51 ಕೋಟಿ ಸಸಿಗಳನ್ನು ನೆಡುವ ಮೂಲಕ ರಾಜ್ಯವು ಹೊಸ ದಾಖಲೆ ನಿರ್ಮಿಸಿದೆ. 'ಪೌಷ್ಟಿಕಾಂಶ ಶಕ್ತಿಕೇಂದ್ರ'ವೆಂದು ಕರೆಯಲ್ಪಡುವ ನುಗ್ಗೆಕಾಯಿ ಸಸಿಗಳನ್ನು ನೆಡುವ ಮೂಲಕ ಸಾರ್ವಜನಿಕರ ಆರೋಗ್ಯದ ಬಗ್ಗೆ ಸರ್ಕಾರದ ಬದ್ಧತೆಯನ್ನು ಈ ಅಭಿಯಾನವು ಒತ್ತಿಹೇಳುತ್ತದೆ.

'ತಾಯಿ ಹೆಸರಿನಲ್ಲಿ ಒಂದು ಸಸಿ'

ಜಾಗತಿಕ ತಾಪಮಾನ ಏರಿಕೆಯಂತಹ ಸವಾಲುಗಳನ್ನು ಎದುರಿಸುವ ಉದ್ದೇಶದಿಂದ ದೇಶಾದ್ಯಂತ 'ತಾಯಿ ಹೆಸರಿನಲ್ಲಿ ಒಂದು ಸಸಿ' ನೆಡುವ ಪಿಎಂ ನರೇಂದ್ರ ಮೋದಿಯವರ ವಿನೂತನ ಕರೆಗೆ ರಾಜ್ಯದ ಸಿಎಂ ಸಂಪೂರ್ಣವಾದ ಬೆಂಬಲ ವ್ಯಕ್ತಪಡಿಸಿದ್ದಾರೆ. ಈ ಅಭಿಯಾನದಡಿ ತಮ್ಮ ಅಧಿಕೃತ ನಿವಾಸದಲ್ಲಿ ಕೆಂಪು ಚಂದನದ ಮರವನ್ನು ನೆಟ್ಟು, ರಾಜ್ಯದ ಜನತೆಯ ಪರವಾಗಿ ಪ್ರಧಾನಮಂತ್ರಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು. ಈ ಅಭಿಯಾನವು ಪ್ರತಿಯೊಬ್ಬ ನಾಗರಿಕರನ್ನು ಪರಿಸರ ಸಂರಕ್ಷಣೆಯ ಪ್ರಯತ್ನದಲ್ಲಿ ತೊಡಗಿಸಲು ಪ್ರಯತ್ನಿಸುತ್ತದೆ.

ಪ್ರಧಾನಿ ಮೋದಿಯವರ ಸೂಚನೆ ಮೇರೆಗೆ, ಯುಪಿಯ ಪ್ರತಿಯೊಬ್ಬರೂ 'ವೃಕ್ಷರೋಪಣ ಮಹಾಭಿಯಾನ'ದ ಭಾಗವಾಗುವಂತೆ ಮತ್ತು ತಮ್ಮ ತಾಯಿ ಹೆಸರಿನಲ್ಲಿ ಸಸಿ ನೆಡುವಂತೆ ಸಿಎಂ ಯೋಗಿ ಅವರು ಮನವಿ ಮಾಡಿದರು. ಈ ಉದ್ದೇಶಕ್ಕಾಗಿ ಸರ್ಕಾರ ತನ್ನ ನರ್ಸರಿಗಳಲ್ಲಿ 54 ಕೋಟಿ ಸಸಿಗಳನ್ನು ಸಿದ್ಧಪಡಿಸಿದೆ. ಇದರಲ್ಲಿ ಪರಿಸರಕ್ಕೆ ಪ್ರಯೋಜನವಾದ ಪೀಪಲ್, ಪಾಕರ್, ಬೇವು, ದೇಸಿ ಮಾವು, ಜಾಮೂನ್, ಪೇರಲ, ಶೀಷಮ್ ಮತ್ತು ತೇಗದಂತಹ ಸಸಿಗಳು ಸೇರಿವೆ. ಪಿಎಂ ಆವಾಸ್ ಯೋಜನೆಯ ಫಲಾನುಭವಿಗಳಿಗೆ ಉಚಿತವಾಗಿ ಮೊರಿಂಗಾ ಗಿಡಗಳನ್ನು ನೀಡಲಾಗಿದೆ. ರಾಜ್ಯಾದ್ಯಂತ ತೋಟದ ಉದ್ದೇಶಕ್ಕೆ 5.5 ಲಕ್ಷ ಮೊರಿಂಗಾ ಗಿಡಗಳನ್ನು ಒದಗಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ.

ಈ ವ್ಯಾಪಕ ಅಭಿಯಾನವು ಅರಣ್ಯ ಭೂಮಿ, ಗ್ರಾಮ ಪಂಚಾಯತ್ ಮತ್ತು ಸಮುದಾಯದ ಜಮೀನುಗಳು, ಎಕ್ಸ್‌ಪ್ರೆಸ್‌ವೇಗಳು, ಚತುಷ್ಪಥ ರಸ್ತೆಗಳು, ಅಮೃತ್ ಸರೋವರ, ಮಂಡಿ ಸಮಿತಿ, ಕಾಲುವೆಗಳು, ಅಭಿವೃದ್ಧಿ ಪ್ರಾಧಿಕಾರಗಳ ಜಮೀನುಗಳು, ವೈದ್ಯಕೀಯ ಮತ್ತು ಶಿಕ್ಷಣ ಸಂಸ್ಥೆಗಳು ಮತ್ತು ಖಾಸಗಿ ಆವರಣದಲ್ಲಿ ನೆಡುತೋಪುಗಳನ್ನು ಒಳಗೊಂಡಿದೆ. ಖಾಸಗಿ ವಲಯಗಳು, ಎನ್‌ಜಿಓಗಳು ಮತ್ತು ಧಾರ್ಮಿಕ-ಸಾಮಾಜಿಕ ಸಂಸ್ಥೆಗಳೊಂದಿಗೆ ಕೈಜೋಡಿಸಿ, ಈ ಪ್ರಯತ್ನದ ಭಾಗವಾಗಲು ಜನರನ್ನು ಪ್ರೋತ್ಸಾಹಿಸಲಾಗಿದೆ.

ಜುಲೈನಲ್ಲಿ ಪ್ರಾರಂಭವಾದ ಕಾರ್ಯಕ್ರಮವು ಸೆಪ್ಟೆಂಬರ್‌ವರೆಗೆ ಮುಂದುವರಿಯುತ್ತದೆ. ನೆಟ್ಟ ಸಸಿಗಳ ಸಂರಕ್ಷಣೆಗಾಗಿ ನಿಯಮಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಗಿಡ ನೆಟ್ಟವರೇ ಅದನ್ನು ರಕ್ಷಿಸಬೇಕೆಂದು ಸಿಎಂ ಮನವಿ ಮಾಡಿದರು. ಪರಸ್ಪರ ಸಮನ್ವಯದ ಮೂಲಕ ಗುರಿ ಸಾಧಿಸುವಂತೆ ಸಂಬಂಧಿತ ಇಲಾಖೆಗಳಿಗೆ ಸೂಚಿಸಲಾಗಿದೆ. ಈ ಮೆಗಾ ಅಭಿಯಾನವನ್ನು ರಾಜ್ಯದೆಲ್ಲೆಡೆ ಯಶಸ್ವಿಗೊಳಿಸಲು ಪ್ರತಿ ಇಲಾಖೆ ಮತ್ತು ಜಿಲ್ಲೆಗೆ ನಿರ್ದಿಷ್ಟ ಗುರಿ ನಿಗದಿಗೆ ವಿಶೇಷ ಒತ್ತು ನೀಡಲಾಗಿದೆ. ರಾಜ್ಯ ಸಚಿವರು ಮತ್ತು ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಸಂಬಂಧಿಸಿದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಇದರ ಯಶಸ್ವಿಗೆ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಪ್ಲಾಂಟೇಶನ್ ಸೈಟ್‌ಗಳ ಜಿಯೋ ಟ್ಯಾಗಿಂಗ್‌ಗೆ ದೃಢವಾದ ಕ್ರಮಗಳನ್ನು ಸಹ ಅಳವಡಿಸಲಾಗಿದೆ.

ಉತ್ತರ ಪ್ರದೇಶದಲ್ಲಿ ವನ ಧನ ವಿಕಾಸ ಯೋಜನೆ

- ಈ ಯೋಜನೆಯಡಿ ಭಾ.ಬು.ಸ.ಮಾ.ಅ.ಒ (ಭಾರತೀಯ ಬುಡಕಟ್ಟು ಸಹಕಾರ ಮಾರುಕಟ್ಟೆ ಅಭಿವೃದ್ಧಿ ಒಕ್ಕೂಟ) ಭಾರತ ಸರ್ಕಾರವನ್ನು ಪ್ರತಿನಿಧಿಸುತ್ತದೆ. ರಾಜ್ಯ ಸರ್ಕಾರದ ಪರವಾಗಿ ಉತ್ತರ ಪ್ರದೇಶ ಬುಡಕಟ್ಟು ಕಲ್ಯಾಣ ಇಲಾಖೆಯು ನೋಡಲ್ ಏಜೆನ್ಸಿಯಾಗಿದೆ ಮತ್ತು ಉತ್ತರ ಪ್ರದೇಶ ಅರಣ್ಯ ನಿಗಮವು ಅನುಷ್ಠಾನ ಸಂಸ್ಥೆಯಾಗಿದೆ.
- ಈ ಯೋಜನೆಯನ್ನು ಯುಪಿಯ 16 ಜಿಲ್ಲೆಗಳಲ್ಲಿ ಜಾರಿಗೊಳಿಸಿದ್ದು, ಸಣ್ಣ ಅರಣ್ಯ ಉತ್ಪನ್ನಗಳು ಹೇರಳವಾಗಿವೆ.
- ಪ್ರಧಾನಮಂತ್ರಿ ವನ ಧನ ವಿಕಾಸ ಯೋಜನೆಯಡಿ ಸೋನಭದ್ರ, ಚಿತ್ರಕೂಟ ಮತ್ತು ಲಲಿತಪುರ ಜಿಲ್ಲೆಗಳಲ್ಲಿ ಈ ಸ್ಕೀಮ್ ಜಾರಿಯಲ್ಲಿದೆ.
- ಸೋನಭದ್ರ (1), ಚಿತ್ರಕೂಟ (1) ಮತ್ತು ಲಲಿತಪುರ (1) ವನ ಧನ ವಿಕಾಸ ಕೇಂದ್ರಗಳನ್ನು ಹೊಂದಿದೆ.

ಯುಪಿಯ ಹಸಿರು ಹೊದಿಕೆ

ಉತ್ತರ ಪ್ರದೇಶವು ಹೇರಳವಾದ ನೈಸರ್ಗಿಕ ಸಂಪನ್ಮೂಲಗಳು ಮತ್ತು ದೈವಿಕ ಅನುಗ್ರಹವನ್ನು ಹೊಂದಿದೆ. ನೆಡುತೋಪು ಅಭಿಯಾನವು ಸಾಮೂಹಿಕ ಆಂದೋಲನವಾಗಿ ರೂಪುಗೊಂಡಿದ್ದು, ಕಳೆದ ಏಳು ವರ್ಷಗಳಲ್ಲಿ 200 ಕೋಟಿಗೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ನೆಟ್ಟ ಸಸಿಗಳ ಮಾಹಿತಿ ಇಂತಿದೆ:

2017-18ರಲ್ಲಿ	5.72 ಕೋಟಿ
2018-19ರಲ್ಲಿ	11.77 ಕೋಟಿ
2019-20ರಲ್ಲಿ	22.60 ಕೋಟಿ
2020-21ರಲ್ಲಿ	25.87 ಕೋಟಿ
2021-22ರಲ್ಲಿ	30.53 ಕೋಟಿ
2022-23ರಲ್ಲಿ	35.49 ಕೋಟಿ
2023-24ರಲ್ಲಿ	36.16 ಕೋಟಿ
2024-25ರಲ್ಲಿ	36.74 ಕೋಟಿ

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಡಿಯ ಸಂಸ್ಥೆಯಾದ ಡೆಹ್ರಾಡೂನ್‌ನ ಭಾರತೀಯ ಅರಣ್ಯ ಸಮೀಕ್ಷೆಯ (ಎಫ್‌ಎಸ್‌ಐ) ಮಾಹಿತಿ ಪ್ರಕಾರ, ಯುಪಿಯ ಒಟ್ಟು ಅರಣ್ಯ ಪ್ರದೇಶವು ಸಾರ್ವಜನಿಕರ ವ್ಯಾಪಕ ಸಹಕಾರದೊಂದಿಗೆ 14,818 ಚದರ ಕಿ.ಮೀ.ನಷ್ಟಿದೆ. ರಾಜ್ಯದ ಒಟ್ಟು ಹಸಿರು ಪ್ರದೇಶವು ನಿರಂತರವಾಗಿ ಹೆಚ್ಚುತ್ತಿದೆ. ರಾಜ್ಯ ಸರ್ಕಾರ ಒಟ್ಟು ಹಸಿರು ಪ್ರದೇಶವನ್ನು 9.23% (2021-22ರಲ್ಲಿ) ರಿಂದ 2026-27ರ ವೇಳೆಗೆ 15%ಗೆ ವಿಸ್ತರಿಸುವ ಗುರಿ ಹೊಂದಿದ್ದು, 175 ಕೋಟಿ ಸಸಿಗಳನ್ನು ನೆಡಲಾಗುತ್ತದೆ ಮತ್ತು ಮುಂದಿನ ಐದು ವರ್ಷಗಳಲ್ಲಿ ಸಂರಕ್ಷಿಸಲಾಗುತ್ತದೆ.

ಕಾರ್ಬನ್ ಫೈನಾನ್ಸ್

ಸರ್ಕಾರ ಪ್ರೋತ್ಸಾಹಧನ ನೀಡುವ ಮೂಲಕ ರೈತರ ಆದಾಯ ಹೆಚ್ಚಿಸಲು 'ಕಾರ್ಬನ್ ಫೈನಾನ್ಸ್' ಅನ್ನು ಸಕ್ರಿಯವಾಗಿ ಅನುಸರಿಸುತ್ತಿದೆ. ಕಾರ್ಬನ್ ಫೈನಾನ್ಸ್ ಬಗೆಗಿನ ಮಾಹಿತಿಯನ್ನು ರೈತರಿಗೆ ತಲುಪಿಸಲು ಪ್ರಯತ್ನಿಸಲಾಗುತ್ತಿದೆ. ಇಂಗಾಲ ಗಳಿಸಲು ರೈತರಿಗೆ ಆರ್ಥಿಕ ಪ್ರೋತ್ಸಾಹವಾಗಿ ಚೆಕ್‌ಗಳನ್ನು ನೀಡಲಾಗಿದೆ. ಕಾರ್ಬನ್ ಫೈನಾನ್ಸಿಂಗ್ ಯೋಜನೆಯಡಿ ಮೊದಲ ಬಾರಿಗೆ ಯುಪಿ ರೈತರು ಪ್ರಯೋಜನ ಪಡೆದಿದ್ದಾರೆ.

ಅಲ್ಲದೆ, ಭೂಮಿ ಕೊರತೆಯಿರುವ ಇಲಾಖೆಗಳು ಇತರರೊಂದಿಗೆ ಸಹಕರಿಸುತ್ತಿವೆ ಮತ್ತು ನೆಡುತೋಪು ಪ್ರಯತ್ನಗಳಿಗೆ ಆದ್ಯತೆ ನೀಡುತ್ತಿದೆ ಹಾಗೂ ಆಯಕಟ್ಟಿನಲ್ಲಿ ನೆರಳು-ಹಣ್ಣಿನ ಮರಗಳನ್ನು ನೆಡಲಾಗುತ್ತಿದೆ. ಗಂಗಾ, ಯಮುನಾ, ಹಿಂಡನ್ ಮತ್ತು ರಾಜ್ಯದ ಇತರೆ ನದಿಗಳ ಕರಾವಳಿ ಪ್ರದೇಶಗಳಲ್ಲಿ ನೆಡುತೋಪಿಗೆ ಪ್ರಯತ್ನಿಸಲಾಗಿದೆ.

ನೆಟ್ಟ ಸಸಿಗಳು ಬೆಳೆದ ಮೇಲೆ 8,242 ಕೋಟಿ ಲೀ. ಆಮ್ಲಜನಕವನ್ನು ಉತ್ಪಾದಿಸುತ್ತವೆ. ಇದು ಕನಿಷ್ಠ 15 ಕೋಟಿ ಜನರಿಗೆ ಪೂರೈಸುತ್ತದೆ.

> "ಉತ್ತರ ಪ್ರದೇಶವು ದಿನವೊಂದರಲ್ಲಿ 36.51 ಕೋಟಿ ಸಸಿಗಳನ್ನು ನೆಡುವ ಮೂಲಕ ಮಹತ್ವದ ಹೆಜ್ಜೆಯಿಟ್ಟಿದೆ. ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಕರೆಯ ಮೇರೆಗೆ ಹಮ್ಮಿಕೊಂಡಿರುವ ಈ ಅಭೂತಪೂರ್ವ ಉಪಕ್ರಮವು ಸಾರ್ವಜನಿಕರ ವ್ಯಾಪಕ ಭಾಗವಹಿಸುವಿಕೆಗೆ ಸಾಕ್ಷಿಯಾಗಿದೆ."
>
> ಯೋಗಿ ಆದಿತ್ಯನಾಥ್
> ಮುಖ್ಯಮಂತ್ರಿ

ಈ ವ್ಯಾಪಕ ಅಭಿಯಾನವು ಅರಣ್ಯ ಭೂಮಿ, ಗ್ರಾಮ ಪಂಚಾಯತ್ ಮತ್ತು ಸಮುದಾಯದ ಜಮೀನುಗಳು, ಎಕ್ಸ್‌ಪ್ರೆಸ್‌ವೇಗಳು, ಚತುಷ್ಪಥ ರಸ್ತೆಗಳು, ಅಮೃತ್ ಸರೋವರ, ಮಂಡಿ ಸಮಿತಿ, ಕಾಲುವೆಗಳು, ಅಭಿವೃದ್ಧಿ ಪ್ರಾಧಿಕಾರಗಳ ಜಮೀನುಗಳು, ವೈದ್ಯಕೀಯ/ಶಿಕ್ಷಣ ಸಂಸ್ಥೆಗಳು ಇತ್ಯಾದಿಗಳಲ್ಲಿ ಸಸಿ ನೆಡುವುದನ್ನು ಒಳಗೊಂಡಿದೆ.

31-08-2024
Eco times Pg 01

FUNDRAISE AT DOUBLE THE VALUATION

Blue Tokai Coffee gets a Verlinvest Flavour

Who is Verlinvest?

Investment vehicle of AB-InBev founding shareholders of Belgium

Global portfolio Vitamin Water, Remy Cointreau, Oatly, Juicy Chemistry, Kopi Kenangan

India portfolio Sula Vineyards, Future Retail, WakeFit, Epigamia, Veeba, Byju's, Purplle, Heads Up For Tails, among others

Arijit Barman

Mumbai: Verlinvest, investment vehicle of the Belgian family behind the world's largest brewer, AB-Inbev, is poised to invest Rs 200 crore (about $24 million) in Blue Tokai Coffee Roasters, at a ₹1,200-crore ($143 million) valuation — double that from a year-and-a-half ago, said people in the know.

Existing investor Hemendra Kothari's family office and Anicut Capital are also expected to join the homegrown specialist coffee chain's ₹250-crore round, with the residual amount comprising a mix of primary and secondary sale of shares, the people said.

The round will be the 11-year-old company's largest raise, as a battle brews between some of India's top business houses and upstarts.

Announcement Soon ▸▸ 7

Announcement on Infusion Soon

▸▸ From Page 1

Global giants such as Starbucks and Tim Hortons are also competing in this fast-growing industry. A formal announcement on the transaction is expected as early as this weekend, the people said.

Verlinvest didn't immediately respond to ET's queries. Matt Chitharanjan, cofounder of Blue Tokai, did not comment. In January 2023, Blue Tokai raised ₹200 crore from A91 Partners in a Series B round, which also saw investment banker Kothari come in at a ₹600-crore valuation, post-money.

Earlier this year, 12 Flags Group, a consumer fund set up by former Reckitt Benckiser global chief Rakesh Kapoor, joined the cap table at a ₹1,000-crore valuation.

Blue Tokai is also backed by Bollywood actress Deepika Padukone, Kirloskar family office Snow Leopard Ventures, Negen Capital, Mauryan Capital and White Whale Venture. The brand operates through physical cafes, ecommerce and business-to-business (B2B), with the first category generating the lion's share of revenue.

In FY24, Blue Tokai clocked a revenue of ₹240 crore and losses of ₹15-20 crore. This fiscal, losses are expected to narrow to ₹5-7 crore. Blue Tokai posted a revenue of ₹75 crore and ₹2.5 crore of losses in the quarter ended June. The company currently has a nationwide footprint of 120 cafes, which it aims to grow to 200 in the next 12 months.

Rival Third Wave Coffee has about 100 stores, but is facing headwinds and stalled growth in the last few months, according to industry observers. Alternative beverage (tea) rival Chaayos has around 230 outlets. US coffee chain Starbucks has some 400 stores in India, but Blue Tokai's products are at least 25-30% cheaper than Starbucks.

The estimated $17.54-billion Indian cafe and bar market is projected to reach $26.17 billion by 2029, according to market intelligence and advisory firm Mordor Intelligence. India's coffee industry is forecast to surpass $4.2 billion, with coffee retail chains likely to reach $850 million by 2025.

CO HAS 3 VERTICALS

Blue Tokai operates through three verticals – physical cafes, ecommerce and B2B. Cafes generate the lion's share of revenue

FOR FULL REPORT, GO TO
www.economictimes.com

ಉದ್ದು, ಸೋಯಾಬಿನ್ ಖರೀದಿಗೆ ಕೇಂದ್ರ ಅನುಮತಿ

ನವದೆಹಲಿ: ಬೆಂಬಲ ಬೆಲೆ ಯೋಜನೆಯಡಿ ಉದ್ದು ಹಾಗೂ ಸೋಯಾಬಿನ್ ಖರೀದಿಗೆ ಕೇಂದ್ರ ಕೃಷಿ ಸಚಿವಾಲಯ ಅನುಮತಿ ನೀಡಿದೆ.

ನಾಲ್ಕೈದು ದಿನಗಳ ಹಿಂದೆ ಹೆಸರು ಮತ್ತು ಸೂರ್ಯಕಾಂತಿ ಬೆಳೆಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಕೇಂದ್ರ ಅನುಮತಿ ನೀಡಿತ್ತು. ರಾಜ್ಯದಲ್ಲಿ 2024-25 ರ ಮುಂಗಾರು ಹಂಗಾಮಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ 19,760 ಟನ್ ಉದ್ದು ಹಾಗೂ 1,03,315 ಟನ್ ಸೋಯಾಬಿನ್ ಖರೀದಿಗೆ ಒಪ್ಪಿಗೆ ನೀಡಿದೆ.

ಉದ್ದಿನ ಕಾಳು ₹7,400 ಮತ್ತು ಸೋಯಾಬಿನ್‌ಗೆ ₹4,892 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ಕಳೆದ ವರ್ಷ ₹6,950 ಇದ್ದ ಉದ್ದಿನ ಬೆಂಬಲ ಬೆಲೆ ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ₹450 ಹೆಚ್ಚಳ ಕಂಡಿದೆ. ₹4,600 ದರವಿದ್ದ ಸೋಯಾಬಿನ್ ಬೆಂಬಲ ಬೆಲೆ ಈಗ ₹292 ಹೆಚ್ಚಳವಾಗಿದೆ.

ತಕ್ಷಣ ಖರೀದಿ ಕೇಂದ್ರ ತೆರೆಯಲು ಒತ್ತಾಯ: ರಾಜ್ಯ ಸರ್ಕಾರ ತಕ್ಷಣವೇ ರಾಜ್ಯದಾದ್ಯಂತ ಬೆಂಬಲ ಬೆಲೆ ಖರೀದಿ ಕೇಂದ್ರಗಳನ್ನು ಆರಂಭಿಸಿ ಹೆಸರು, ಸೂರ್ಯಕಾಂತಿ ಜತೆಗೆ ಉದ್ದು ಮತ್ತು ಸೋಯಾಬಿನ್ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

31-08-2024
Prajavani
Pg 12

ದುಬಾರಿ ಕೀಟ

ಕೀಟಗಳ ಬಗೆಗೆ ನಾವು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಕೀಟಬಾಧೆ ಎಂದೇ ಅವುಗಳನ್ನು ಪರಿಗಣಿಸುತ್ತೇವೆ. ಆದರೆ ನಮ್ಮ ಪ್ರಕೃತಿಯಲ್ಲಿ ಅಪರೂಪ ಹಾಗೂ ವಿಶಿಷ್ಟವಾದ ಅನೇಕ ಕೀಟಗಳಿವೆ. ಆ ಪೈಕಿ ಬಹುಶಃ ಅಗ್ರಸಾಲಿನಲ್ಲಿ ಇರೋದು ಸ್ಟ್ಯಾಗ್ ಬೀಟಲ್ ಎಂಬ ಕೀಟ. ಕನ್ನಡದಲ್ಲಿ ಇದನ್ನು ಸಾರಂಗ ಜೀರುಂಡೆ ಎನ್ನುತ್ತಾರೆ. ಬಹುಶಃ ತಲೆಯ ಮೇಲೆ ಸಾರಂಗದ ಕೋಡಿನಂಥ ರಚನೆ ಹೊಂದಿರುವುದರಿಂದ ಈ ಹೆಸರು. ಇದು ಇಷ್ಟೊಂದು ಬೇಡಿಕೆ, ಪ್ರಸಿದ್ಧಿ ಪಡೆದಿರುವುದಕ್ಕೆ ಕಾರಣ ಈ ಕೀಟಗಳು ಅಪರೂಪ. ಕೀಟ ಸಂಗ್ರಹದ ಹವ್ಯಾಸಗಾರರಿಗೆ ಇದರ ಮೇಲೆ ಸದಾ ಕಣ್ಣು. ಈ ಕಾರಣಕ್ಕಾಗಿ ಇದಕ್ಕೆ ಬೇಡಿಕೆ ಹೆಚ್ಚು. ಅದೇ ಕಾರಣಕ್ಕೆ ಬೆಲೆಯೂ ದುಬಾರಿ. ಹಾಗಾದರೆ ಇದರ ಬೆಲೆ ಎಷ್ಟು ? ಕೇಳಿದರೆ ಬೆಚ್ಚಿ ಬೀಳಬಹುದು. ಒಂದು ಕೀಟದ ಬೆಲೆ ಸುಮಾರು 75 ಲಕ್ಷ ರೂ. ಎಂದು ಅಂದಾಜಿಸಲಾಗಿದೆ.

31-08-2024
S-karanataka
Pg 04

The beneficial side of invasive plants

Invasive plants are detested for the ecological devastation they cause, but in rural India, people have adapted to some alien species in unique ways and are reaping benefits, writes Spoorthy Raman

Ecologists have shown how devastating invasive plants, such as lantana and water hyacinth, are to our ecosystems and economies for decades. They stifle native species, overrun our farmlands, threaten fish and other aquatic life, and cause massive economic losses. A 2022 study estimates that invasive species—plants and animals—cost the Indian economy anywhere between $127.3 billion to 182.6 billion (₹8.3 trillion to 11.9 trillion) in the last 60 years. Across the world, invasive species receive a bad rap for being the Grim Reapers of a healthy ecosystem.

But that's just the well-known side of the story. In a first-of-its-kind study, researchers at the Ashoka Trust for Research in Ecology and the Environment (ATREE) have uncovered the little-known side of invasive species—how they affect the well-being of India's rural households, such as their safety, access to resources and livelihoods.

The researchers peered through nearly 50 published studies on the impact of invasive plants on human well-being, covering 20 species. Their findings were published in the journal *Environmental Development*.

A quarter of India's 650,000 villages are on the peripheries of forests, where people, mostly belonging to Indigenous and marginalised communities, depend on non-timber forest products for food, fuelwood and sustenance. Invasive species that permeated most of India's forests and grasslands have invariably become a part of their lives—a crucial aspect for ecologists to consider while managing these species.

"In India, unlike in developing countries, there are very few inviolate spaces where people and forests (including grasslands and other open natural ecosystems) do not coexist," says study author Ramya Ravi, "Therefore, separating ecological impacts alone cannot be a key focus of biological invasions and their management."

Ecologist Alok Bang from Azim Premji University, Bhopal, who was not involved in the study, says countries like India do not always have updated checklists of invasive species. Hence, studies like this, which bring to light the lesser-known socioeconomic impacts of such species, are essential, he says. "The study is based on ₹50 studies done in India, and thus, has synthesised something new—this is a precious knowledge-generation process at the national level."

A thicket of mesquites in Blackbuck National Park, Gujarat. IMAGE CREDIT: ANKILA HIREMATH

Many benefits, few harms

Mesquite (*Prosopis juliflora*)—a native Mexican thorny shrub widespread across India—was a significant source of firewood and fuelwood in many parts of the country. In coastal Andhra Pradesh and Tamil Nadu, women preferred fuelwood from mesquites to venturing deep into the forest in search of other firewood. Prosopis-based charcoal derived from the plant, which has a better combustion rate and higher calorific value than firewood, provided supplementary income.

In arid regions, such as Ranthambore, mesquite pods were used as fodder for livestock when grass was scarce. The plant's nectar-filled flowers support bees in the region, whose honey local communities depend on. The plant is also used as fencing material around croplands and homesteads or for making bullock carts and other agricultural equipment.

On the flip side, mesquites caused slow-healing injuries to people and livestock and became a barrier to accessing natural resources. For instance, in Rajasthan's Keoladeo National Park, these invasive plants increased conflicts among pastoralist communities over available pastures, resulting in some communities giving up pastoralism.

Lantana (*Lantana camara*), a native plant in the American tropics, is used by some communities to make furniture, sculptures, baskets, and medicine. However, when the dense shrub grows in forests, it reduces visibility. It increases people's encounters with dangerous wildlife, as reported by the Soligas living in Karnataka's Biligiri Rangaswamy Temple Tiger Reserve (BRT). The plant also makes it challenging for them to find edible tubers. Lantana expands in forests and reduces the abundance of native forest crops such as Indian gooseberry (amla), soapnut tree, ritha, Indian walnut (haritaki) and Indian frankincense (guggulu)—all of which forest communities collect and sell to make a living.

With their dense mats, aquatic weeds choke water bodies and prevent access to them. In Kashmir, the spreading alligator weed (Alternanthera philoxeroides) has increased costs for fishermen who must remove the plants to help their fishing boats access the lake. In some regions, aquatic weeds hindered the harvest of water chestnuts and Indian lotus, which some communities collect and sell for livelihoods.

"It is very interesting to note a mixed response of invasive plants on people's well-being, especially on how it could positively impact livelihood-related criteria," says plant biologist Geetha Ramaswami from Nature Conservation Foundation, who was not involved in the study. "Maybe we are seeing some human adaptations towards using invasive species."

Implications on managing invasive plants

The study shows that communities in rural India depend on invasive plants for many aspects of their lives. Hence, the management approach to them cannot be just removal, like it has been. "In instances where there are positive impacts, removal and restoration could result in social justice issues," warns Ravi. "Even though the predominant impacts from invasive species are negative, we cannot entirely undermine the positive impacts to people, given that our study also finds that poverty appears to be a key driver of adaptation to invasive species."

The researchers suggest that decisions on invasive species management must consider the social and cultural context and the perception and use of these plants among communities. For some species, such as alligator weeds and *Azolla crisata*, which have no benefits, removing the plants might be the best way to manage them. On the other hand, eliminating mesquites in Kutch's Wild Ass Sanctuary, despite them hindering grass growth needed for wild asses, may be detrimental to people's well-being as communities in the region rely on the plant for their livelihoods.

"There is, therefore, a need for qualitative methods–social, cultural, and spatial realities–that influence decisions to remove or retain," argues Ravi. Policies around invasive species management, therefore, must involve input from local communities, consider diverse perspectives, promote environmental justice, and reflect the many realities of invasives. "Communities can offer crucial insights on management, invasion processes, cost-benefit analyses, and contextualize the positive or negative impacts."

31-08-2024
Dec Hrd
Pg 09

Cheer for ryots as Centre approves MSP for black gram and soybean

TIMES NEWS NETWORK

Bengaluru: In a relief for farmers, the Centre has approved Karnataka's request to procure black gram and soybean at revised minimum support prices (MSP) set by the Union govt in June this year.

The Centre has sanctioned procurement of 19,760 tonnes of black gram and more than 1 lakh tonnes of soybeans. Pralhad Joshi, Union minister for consumer affairs, food, and public distribution, described the decision as a "gift to Karnataka farmers for the Ganesha festival."

MSP for black gram has been set at Rs 7,400 per quintal, up from Rs 6,950 last year, marking an increase of Rs 450 per quintal. Soybean MSP has been fixed at Rs 4,892 per quintal, up from Rs 4,600, reflecting an increase of Rs 292 per quintal. Recently, the Union govt also approved MSP procurement for green gram and sunflower.

Joshi said the central agriculture ministry has instructed the state to open purchase centres for these crops. "I urge the state govt to establish centres to purchase soybean and black gram, in addition to already approved green gram and sunflower MSP centres," he said.

The Centre has authorised these centres for 90 days to facilitate procurement from farmers. This step is intended to support farmers, as the market prices for these crops are currently lower than the MSP.

31-08-2024
Eco of Times
Pg 01